

# ಅಬ್ಬಾ.. ಇದೆಂಥ ಹಬ್ಬ!

ಭಾರತದಲ್ಲಿ ದೇವರು–ಧರ್ಮಗಳ ಹೆಸರಿನಲ್ಲಿ ಆಚರಿಸುವ ಸಿಡಿಯಂತಹ ಕ್ರೂರ ಆಚರಣೆಗಳು ಅಮಾನುಷವೇ. ಇದನ್ನು ವಿರೋಧಿಸುವವರು ಥಾಯ್ಲೆಂಡ್ ನ ಫುಕೆಟ್ ಎಂಬಲ್ಲಿ ನಡೆಯುವ ಒಂಬತ್ತು ದಿನಗಳ ವೆಜಿಟೇರಿಯನ್ ಹಬ್ಬ ಸಮಯದಲ್ಲಿ ಮೈ ಜುಂ ಎನಿಸುವ ಭಕ್ತರ ಸೇವೆಗಳನ್ನು ಕಂಡರೆ ಏನೆನ್ನುತ್ತಾರೋ! ಪ್ರತೀ 347 ದಿನಗಳಿಗೊಮ್ಮೆ ಒಂಬತ್ತು ಹೆಸರಾಂತ ದೇವತೆಗಳ ಹೆಸರಿನಲ್ಲಿ ನಡೆಯುವ ಹಬ್ಬದಲ್ಲಿ ಪಾನಗೋಷ್ಠಿಗಳಿಲ್ಲ. ಹರಕೆ ಹೊತ್ತ ಸಾವಿರಾರು ಭಕ್ತರು ಭಕ್ತಿಶ್ರದ್ಧೆಗಳಿಂದ ಹರಿತವಾದ ಕತ್ತಿಗಳನ್ನು ಒಂದು ದವಡೆಯಲ್ಲಿ ತೂರಿಸಿ ಇನ್ನೊಂದು ದವಡೆಯಲ್ಲಿ ಹೊರ ತೆಗೆಯುತ್ತಾರೆ, ನಾಲಗೆಯ ಮಧ್ಯೆ ಶೂಲವನ್ನು ಇಳಿಬಿಡುತ್ತಾರೆ, ಕೊಡೆಯ ಕಂಬಿ; ಉದ್ದನೆಯ ಸಲಾಕಿ; ನೀಳವಾದ ಭರ್ಚಿ; ಚೂರಿ ಇನ್ನೂ ಏನೆಲ್ಲವನ್ನೂ ತೂರಿಸಿ ಹರಕೆ ಸಲ್ಲಿಸುತ್ತಾರೆ.

ಇದನ್ನು ದವಡೆಯೊಳಗೆ ತೂರಿಸಿ ಹರಕೆ ಸಲ್ಲಿಸಲು ನೆರವಾಗುವವರು ಪರಿಣತ ವೈದ್ಯರು. ಹರಕೆ ಮುಗಿದ ಕೂಡಲೇ ಗಾಯಕ್ಕೆ ಹೊಲಿಗೆ ಹಾಕಿ ಅವರೇ ಚಿಕಿತ್ಸೆ ನೀಡುತ್ತಾರೆ. ಈ ಹರಕೆ ಹೊರುವವರಲ್ಲಿ ಹೆಚ್ಚಿನವರು ಚೀನೀಯರು. ಕೆಲವರು ನಾಲಿಗೆ ಸೀಳಿ ರಕ್ತ ಹರಿಯುವವರೆಗೂ ಕಬ್ಬಿಣದ ಕಂಬಿಗಳನ್ನು ನೆಕ್ಕುವುದುಂಟು!

ಈ ಎದೆ ನಡುಗಿಸುವ ಆಚರಣೆ 2014ರ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 3ರವರೆಗೆ ಥಾಯ್ಲೆಂಡಿನಲ್ಲಿ ನಡೆಯಲಿದೆ. ನೋಡುವ ಎದೆಗಾರಿಕೆ ನಿಮಗಿದೆಯೇ?

■ ಪ.ರಾಮಕೃಷ್ಣ ಶಾಸ್ತ್ರಿ



